**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಂ.ವಿ.ಸಿ. ಸಂಖ್ಯೆಃ 513/2017**

ದಿನಾಂಕಃ 25.10.2024
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಎ.ಸಾ.1

| | | |
|---|---|---|
| ಹೆಸರು | ಃ | ಹಚ್.ಸಿ. ಚನ್ನಕೇಶವ |
| ತಂದೆಯ ಹೆಸರು | ಃ | ಚನ್ನೇಗೌಡ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | ಃ | ಪ್ರಥಮ ದರ್ಜೆ ಸಹಾಯಕ, ಪ್ರಾದೇಶಿಕ ಸಾರಿಗೆ ಕಚೇರಿ, ಮಂಡ್ಯ. |
| ವಾಸಸ್ಥಳ | ಃ | ಮಂಡ್ಯ |

**ಮುಖ್ಯವಿಚಾರಣೆಃ- 2 ನೇ ಎದುರದಾರನ ಪರವಾಗಿ ಶ್ರೀ.ಎ.ಸಿ.ಆರ್ ವಕೀಲರಿಂದಃ-**

ನಾನು ಕಳೆದ ಹತ್ತು ವರ್ಷದಿಂದ ಮಂಡ್ಯದ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕ ಎಂದು ಕರ್ತವ್ಯ ನಿರ್ವಹಿಸುತಿಸದ್ದೇನೆ. ನ್ಯಾಯಾಲಯದಿಂದ ಈ ಅರ್ಜಿಯಲ್ಲಿ ಸಾಕ್ಷ್ಯ ಹೇಳಲು ಮತ್ತು ದಾಖಲೆ ಹಾಜರುಪಡಿಸಲು ಸಮನ್ಸ್ ಬಂದಿದ್ದು ನನ್ನನ್ನು ಈ ಕುರಿತು ಪ್ರಾದೇಶಿಕ ಸಾರಿಗೆ ಅಧಿಕಾರಿಯವರು ನೇಮಕ ಮಾಡಿರುತ್ತಾರೆ.

ಅಧಿಕಾರ ಪತ್ರವನ್ನು ನಿ**ಆರ್-1** ಎಂದು ಗುರುತಿಸಲಾಯಿತು. ಬಿ ರಿಜಿಸ್ಟರ್ ನಕಲನ್ನು ನಿ**ಆರ್-2** ಎಂದು, ಎರಡು ವಾಹನ ಬದಲಾವಣೆ ಹಿಂಬರಹಗಳನ್ನು ನಿ**ಆರ್-3** ಮತ್ತು **4** ಎಂದು, ರಹದಾರಿ ವರ್ಗಾವಣೆ

**ನಿಆರ್-5** ಎಂದು, ನವೀಕರಣ ಹಿಂಬರಹ **ನಿಆರ್-6** ಎಂದು, ರಹದಾರಿಯನ್ನು **ನಿಆರ್-7** ಎಂದು, ವಾಹನ ವೇಳಾ ಪಟ್ಟಿ **ನಿಆರ್-8** ಎಂದು ಮತ್ತು ವೇಳಾಪಟ್ಟಿ ಬದಲಾವಣೆ ಹಿಂಬರಹ **ನಿಆರ್-9** ಎಂದು ಗುರುತಿಸಲಾಯಿತು. ಈ ಅರ್ಜಿಯಲ್ಲಿನ ಬಸ್ ನಿಆರ್-7 ಮತ್ತು 8 ರಲ್ಲಿ ತೋರಿಸಿರುವ ಮಾರ್ಗದಲ್ಲಿ ಮಾತ್ರ ಪ್ರಯಾಣ ಮಾಡಬೇಕು. ಈ ಮಾರ್ಗ ಹೊರತು ಪಡಿಸಿ ರಾಮನಗರದಿಂದ ಬೆಂಗಳೂರಿಗೆ ಮುಖ್ಯ ರಸ್ತೆಯಲ್ಲಿ ಹೋಗಲು ಈ ಅರ್ಜಿಯಲ್ಲಿನ ಬಸ್ ಗೆ ಪರವಾನಿಗೆ ಇಲ್ಲ.

**ಪಾಟೀ ಸವಾಲುಃ- ಅರ್ಜಿದಾರನ ಪರವಾಗಿ ಶ್ರೀಮತಿ. ವಿ.ಆರ್ ವಕೀಲರಿಂದಃ-**

ಈ ಅರ್ಜಿಯಲ್ಲಿ ಅಪಘಾತವಾದ ವಾಹನ ಕೆಎ-54-6336 ಕ್ಕೆ ದಿನಾಂಕ 06.03.2017 ರಿಂದ 29.08.2017 ರವರೆಗೆ ಪರವಾನಿಗೆ ಇತ್ತು ಎನ್ನುವುದು ಸರಿ ಇದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ. ಜಿ.)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.